**ಓ.ಎಸ್. ನಂ. 45/2021** **ಪಿ.ಡಬ್ಲ್ಯೂ- 1**

ಸಾಕ್ಷಿಯನ್ನು ದಿನಾಂಕ **19.9.2022** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಮೊದಲು ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ನಿವೃತ್ತಿ ಹೊಂದಿ ಸುಮಾರು 11 ವರ್ಷವಾಗಿರುತ್ತದೆ. ನಾನು ಕೆಲಸ ಮಾಡುತ್ತಿದ್ದಾಗ ಬೀರ್ವಾಳು ಗ್ರಾಮದಲ್ಲಿರುವ ಸರ್ಕಾರಿ ಕ್ವಾರ್ಟಸ್ ನಲ್ಲಿದ್ದೆ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಈಗಲೂ ಸಹ ಸದರಿ ಕ್ವಾರ್ಟಸ್ ನಲ್ಲಿ ಇದ್ದೇವೆ ಎಂದರೆ ಸರಿ. ನಾನು ನಿವೃತ್ತಿ ಹೊಂದಿದ ನಂತರ ಮುಳ್ಳೂರು ಗ್ರಾಮದಲ್ಲಿ ವರ್ಕಶಾಪ್ ನಡೆಸುತ್ತಿದ್ದೆನೆ ಎಂದರೆ ಸರಿ. ದಾವಾಸ್ವತ್ತಿನ ನಿವೇಶನವನ್ನು ನಾನು ಕೆಲಸದಲ್ಲಿದ್ದಾಗಲೇ ಖರೀದಿ ಮಾಡಿರುತ್ತೇನೆ. ನಾನು 2010 ರಲ್ಲಿ ಮನೆಯನ್ನು ಕಟ್ಟಿರುತ್ತೇನೆ. ಮನೆ ಕಟ್ಟಲು ನಾನು ಪಂಚಾಯಿತಿಯಿಂದ ಪರವಾನಗಿ ಪಡೆದು ಕೊಂಡಿರುತ್ತೇನೆ. ಸದರಿ ಪರವಾನಗಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮನೆಗೆ ನಾನು ಕಂದಾಯ ಪಾವತಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನೆಲಮಹಡಿಯನ್ನು ಮೊದಲು ಕಟ್ಟಿರುತ್ತೇನೆ, ತದನಂತರ ಮೊದಲನೇ ಮಹಡಿಯನ್ನು ಕಟ್ಟಿರುತ್ತೇನೆ. ಮೊದಲನೇ ಮಹಡಿ ಕಟ್ಟಲು ಪರವಾನಗಿ ಪಡೆದುಕೊಂಡಿರುತ್ತೇನೆ. ನಾನು ನೆಲಮಹಡಿ ಕಟ್ಟಲು ಬ್ಯಾಂಕಿನಿಂದ 5 ಲಕ್ಷ ಸಾಲ ಪಡೆದುಕೊಂಡಿರುತ್ತೇನೆ. ಮೊದಲನೇ ಮಹಡಿ ಕಟ್ಟಲು 10 ಲಕ್ಷ ಸಾಲವನ್ನು ನನ್ನ ಮಗನಾದ ಕೃಷ್ಣ ಪಡೆದುಕೊಂಡಿರುತ್ತೇನೆ. ನನ್ನ ಮಗ ಪಡೆದುಕೊಂಡ ಸಾಲಕ್ಕೆ ನಾನು ಜಾಮೀನುದಾರನಾಗಿರುತ್ತೇನೆ. ನನ್ನ ಮಗ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ, ನಾನೇ ಸಾಲ ಪಡೆದುಕೊಂಡಿರುತ್ತೇನೆ ಮತ್ತು ನನ್ನ ಮಗ ಜಾಮೀನುದಾರನಾಗಿದ್ದ ಎಂದರೆ ಸರಿಯಲ್ಲ. ನಾನು ಬ್ಯಾಂಕಿಗೆ ಸಾಲದ ಕಂತನ್ನು ಸರಿಯಾಗಿ ಕಟ್ಟುತ್ತಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಸರಿಯಾಗಿ ಕಟ್ಟುತ್ತಿದ್ದೆ, ಕೊರೋನಾ ಸಮಯದಲ್ಲಿ ಕಟ್ಟಲಾಗಿರುವುದಿಲ್ಲ ಎನ್ನುವರು. ನಾನು ಪ್ರತಿ ತಿಂಗಳು 9,842/- ರೂ ಗಳನ್ನು ಕಂತಾಗಿ ಕಟ್ಟುತ್ತಿದ್ದೆ. ನಾನು ಸಾಲ ಮರುಪಾವತಿ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಾನು ಬ್ಯಾಂಕಿನಲ್ಲಿ ಮತ್ತು ಬೇರೆಯವರಿಂದ ಪಡೆದುಕೊಂಡ ಕೈಸಾಲ ತೀರಿಸಲು ದಾವಾಸ್ವತ್ತನ್ನು ಮಾರಾಟ ಮಾಡಲು ತೀರ್ಮಾನಿಸಿರುತ್ತೇನೆ ಎಂದರೆ ಸರಿ.

ಪ್ರತಿವಾದಿ ನನ್ನ ಕೊನೆ ಮಗಳ ಗಂಡ ಎಂದರೆ ಸರಿ. ಪ್ರತಿವಾದಿ ಮದುವೆಯಾಗುವ ಮೊದಲು ಚಿಲ್ಲರೆ ಅಂಗಡಿ ನಡೆಸುತ್ತಿದ್ದ ಎಂದರೆ ಸರಿ. ಮದುವೆಯಾದ ನಂತರ ನನ್ನ ಕಿರಿಯ ಮಗಳಿಗೆ ಅಂಗನವಾಡಿಯಲ್ಲಿ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಬೆಂಗಳೂರಿನಲ್ಲಿ ಪ್ರತಿವಾದಿಯ ಹೆಂಡತಿ ಸಾಲ ಮಾಡಿಕೊಂಡು ವಾಪಸ್ ಬಂದಿರುತ್ತಾಳೆ ಎನ್ನುವರು. ಪ್ರತಿವಾದಿ ಹೆಂಡತಿ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆಕೆ ಸರಗೂರಿನಲ್ಲಿ ವಾಸ ಮಾಡುತ್ತಿದ್ದಳು, ಪ್ರತಿವಾದಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆತ ಅಗಾಗ ಸರಗೂರಿಗೆ ಬಂದು ಹೋಗುತ್ತಿದ್ದ ಎಂದರೆ ಸರಿ. ಕೊರೋನಾ ಸಮಯದಲ್ಲಿ ಪ್ರತಿವಾದಿ ಅಂಗಡಿಯನ್ನು ಮಾರಾಟ ಮಾಡಿ ಸರಗೂರಿಗೆ ಬಂದಿರುತ್ತಾರೆ ಎಂದರೆ ಸರಿ. ಅವರು ಬೇರೆ ಮನೆ

ಮಾಡಿಕೊಂಡು ಸರಗೂರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಾನು ದಾವಸ್ವತ್ತನ್ನು ಬೇರೆಯವರಿಗೆ ಬೋಗ್ಯಕ್ಕೆ ನೀಡಿರುತ್ತೇನೆ ಎಂದರೆ ಸಾಕ್ಷಿ ಬಾಡಿಗೆಗೆ ನೀಡಿರುತ್ತೇನೆ ಎನ್ನುವರು. ದಿನಾಂಕ 10.5.2016 ರಂದು ಸರಗೂರಿನ ಸಿದ್ದನಾಯಕನ ಹೆಂಡತಿ ಚಿಕ್ಕದೇವಮ್ಮ ರವರಿಗೆ ದಾವಾಸ್ವತ್ತಿನಲ್ಲಿ ಒಂದು ಮನೆಯನ್ನು ಬೋಗ್ಯಕ್ಕೆ ನೀಡಿರುತ್ತೇನೆ ಎಂದರೆ ಸರಿ. ನಾನು ಬೀರ್ವಾಳು ಮತ್ತು ಇತರ ಗ್ರಾಮದವರ ಬಳಿ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ಮತ್ತು ಬೇರೆಯವರಿಂದ ಸಾಲ ಪಡೆದುಕೊಂಡಿದ್ದು ಅದನ್ನು ತೀರಿಸುವ ಸಲುವಾಗಿ ದಾವಾಸ್ವತ್ತನ್ನು ಮಾರಾಟ ಮಾಡಲು ತೀರ್ಮಾನಿಸಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕಿಗೆ ಅಡಮಾನವಾದ ಕಾರಣ ದಾವಾಸ್ವತ್ತನ್ನು ಯಾರು ಖರೀದಿ ಮಾಡಲು ಮುಂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಲವನ್ನು ಮರುಪಾವತಿ ಮಾಡದ ಕಾರಣ ಬ್ಯಾಂಕಿನಿಂದ ದಾವಾಸ್ವತ್ತನ್ನು ಹರಾಜು ಮಾಡಲು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಬೆಂಗಳೂರಿನಲ್ಲಿ ಚಿಲ್ಲರೆ ಅಂಗಡಿ ಮಾರಾಟ ಮಾಡಿದ್ದು, ಅದರಿಂದ ಬಂದ ಹಣದಿಂದ ದಾವಾಸ್ವತ್ತನ್ನು ಖರೀದಿ ಮಾಡುವುದಾಗಿ ಹೇಳಿರುತ್ತಾನೆ ಎಂದರೆ ಸರಿ. ಆ ಸಮಯದಲ್ಲಿ ವ್ಯಾಪಾರದ ಬಗ್ಗೆ ಮಾತುಕತೆ ಆಗಿರುತ್ತದೆ ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲೆಯನ್ನು ಅದರಲ್ಲಿರುವ ಸಹಿ ನಿಮ್ಮದಾ ಎಂದರೆ ಸರಿ ಎನ್ನುವರು. ಸದರಿ ದಾಖಲೆ ಜೆರಾಕ್ಸ ಪ್ರತಿಯಾದ ಕಾರಣ ಅದನ್ನು ಗುರುತಿಸಿರುವುದಿಲ್ಲ. ನನಗೆ ಸದರಿ ದಾಖಲೆಯ ಸಾಕ್ಷಿಗಳಾದ ಮರಿಸಿದ್ದಯ್ಯ, ಮಲಿಯಯ್ಯ, ವೆಂಕಟೇಶ ಹಾಗೂ ನಿಂಗರಾಜು ರವರ ಪರಿಚಯವಿರುತ್ತದೆ. ಸದರಿ ದಾಖಲೆಯಲ್ಲಿ ನಾನು ದಾವಸ್ವತ್ತನ್ನು 12 ಲಕ್ಷಕ್ಕೆ ಪ್ರತಿವಾದಿ ಮತ್ತು ಅವರ ಹೆಂಡತಿಗೆ ಮಾರಾಟ ಮಾಡಲು ಒಪ್ಪಿ , ಮುಂಗಡ ಹಣ 50 ಸಾವಿರವನ್ನು ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಪ್ರತಿವಾದಿ ಸಾಲದ ಬಗ್ಗೆ ವಿಚಾರಿಸಿದಾಗ 11,32,000/- ರೂ. ಬಾಕಿ ಇತ್ತು ಎಂದರೆ ಸರಿ.

ಸದರಿ ಬ್ಯಾಂಕಿನ ಸಾಲದ ಬಾಬ್ತು ಪ್ರತಿವಾದಿ ದಿನಾಂಕ 19.9.2020 ರಂದು ನನ್ನ ಹೆಸರಿಗೆ ಚೆಕ್‌ನ್ನು ನೀಡಿರುತ್ತಾರೆ, ಅದನ್ನು ನನ್ನ ಖಾತೆಗೆ ಜಮಾ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಹಣವನ್ನು ತದನಂತರ ಪ್ರತಿವಾದಿ ನನ್ನ ಚೆಕ್ಕಿನ ಮೂಲಕ ಬ್ಯಾಂಕಿಗೆ ಸಾಲದ ಸಂಬಂಧ ಜಮಾ ಮಾಡಲಾಗಿದೆ ಎಂದರೆ ಸರಿ. ಉಳಿಕೆ 3 ಸಾವಿರವನ್ನು ಪ್ರತಿವಾದಿಗೆ ನೀಡಿರುತ್ತೇನೆ. ಸಿದ್ದನಾಯಕನ ಹೆಂಡತಿಯಾದ ಚಿಕ್ಕದೇವಮ್ಮ ರವರಿಗೆ ಬೋಗ್ಯದ ಹಣ ನೀಡಿದರೆ ಮಾತ್ರ ನಾನು ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಹೆಂಡತಿ ತನ್ನ ತಂದೆ ಮಾಡಿದ ಬೋಗ್ಯದ ಹಣವನ್ನು ಹಿಂದಿರುಗಿಸಲು ಪ್ರತಿವಾದಿ ಬಳಿ ಕೇಳಿಕೊಂಡಿದ್ದು, ಆಗ ಪ್ರತಿವಾದಿ 3.5 ಲಕ್ಷ ಹಣವನ್ನು ಚಿಕ್ಕದೇವಮ್ಮ ರವರಿಗೆ ನೀಡಿ ಬೋಗ್ಯಪತ್ರವನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೂಲ ಬೋಗ್ಯಪತ್ರ ಈಗ ಪ್ರತಿವಾದಿ ಬಳಿ ಇರುತ್ತದೆ ಎಂದರೆ ಗೊತ್ತಿಲ್ಲ. ನಾನು ಬೋಗ್ಯದ ಹಣವನ್ನು ವಾಪಸ್ ನೀಡಿರುವುದಿಲ್ಲ. ಬೋಗ್ಯ ರದ್ದಾದ ನಂತರ ಕ್ರಯಪತ್ರ ಬರೆದುಕೊಡಲು ಪ್ರತಿವಾದಿ ನನ್ನ ಬಳಿ ಅನೇಕ ಬಾರಿ ಬೇಡಿಕೆ ಇಟ್ಟಿರುತ್ತಾರೆ ಎಂದರೆ ಸರಿ. ನಾನು ಕ್ರಯಪತ್ರವನ್ನು ಬರೆದುಕೊಡಲು ಕಾಲಹರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದರ ಸಂಬಂಧ 2-3 ಬಾರಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿಬಾರಿ ಪಂಚಾಯಿತಿಯಾದಾಗ ಪ್ರತಿಬಾರಿ 50 ಸಾವಿರ ಹಣವನ್ನು ಹೆಚ್ಚಾಗಿ ಪ್ರತಿವಾದಿಯಿಂದ ಪಡೆದು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು

ಅಕ್ರಮವಾಗಿ ಪ್ರತಿವಾದಿ ಮತ್ತು ನನ್ನ ಮಗಳಿಂದ ಹೆಚ್ಚಿನ ಹಣವನ್ನು ಪಡೆದುಕೊಳ್ಳುವ ಹುನ್ನಾರ ಹೊಂದಿದ್ದೆ ಎಂದರೆ ಸರಿಯಲ್ಲ.

ದಿನಾಂಕ 15.10.2020 ರಂದು ನಾನು ಮತ್ತು ನನ್ನ ಹೆಂಡತಿ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಕ್ರಯಪತ್ರದಲ್ಲಿ ರೂ. 9,65,000/- ಕ್ರಯದ ಹಣ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ನನಗೆ ಯಾವುದೇ ಬಾಕಿ ಹಣ ಪಾವತಿ ಇರುವುದಿಲ್ಲ ಎಂದು ತಿಳಿಸಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಕೆಳಮಹಡಿಯನ್ನು ಮಾತ್ರ 23 ಲಕ್ಷಕ್ಕೆ ಮಾರಾಟ ಮಾಡಿರುತ್ತೇನೆ ಎನ್ನುವರು. ನಾನು ನಿವೇಶನವನ್ನು ಖರೀದಿ ಮಾಡಿ ಅದರಲ್ಲಿ ಕಟ್ಟಿರುವ ಪೂರ್ತಿ ಮನೆಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಮೊದಲನೇ ಮಹಡಿಯನ್ನು ಮಾತ್ರ ಮಾರಾಟ ಮಾಡಿರುತ್ತೇನೆ ಎನ್ನುವರು.

ಸಾಮಾನ್ಯವಾಗಿ ನಾನು ದಾಖಲೆಗೆ ಸಹಿ ಮಾಡುವಾಗ ಓದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸಾಕ್ಷಿ ಕೆಲವೊಮ್ಮೆ ಓದಿಸಿ ತದನಂತರ ಸಹಿ ಮಾಡುತ್ತೇನೆ, ಕೆಲವೊಮ್ಮೆ ಹಾಗೆಯೇ ಸಹಿ ಮಾಡುತ್ತೇನೆ ಎನ್ನುವರು. ಪಂಚಾಯಿತಿಯಲ್ಲಿ ನನ್ನ ಹೆಸರಿನಲ್ಲಿರುವ ದಾಖಲೆಯನ್ನು ಪಡೆದುಕೊಂಡು ಕ್ರಯಪತ್ರವನ್ನು ನೋಂದಣಿ ಮಾಡುತ್ತಾರೆ ಎಂದರೆ ಸರಿ. ದಾವಾಸ್ವತ್ತು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ನನ್ನ ಹೆಸರಿನಲ್ಲಿ ಇರುವುದಿಲ್ಲ. ನಾನು ಖರೀದಿ ಮಾಡಿದ ನಿವೇಶನದಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸರಿ. ನಾನು ಕ್ರಯಪತ್ರದಲ್ಲಿ ನಿವೇಶನದಲ್ಲಿರುವ ಕಟ್ಟಿರುವ ಪೂರ್ತ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೂರ್ತ ದಾವಾಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರದ ಮೊದಲು ಯಾವುದೇ ಕರಾರು ಪತ್ರವಾಗಿರುವುದಿಲ್ಲ. ನಿಪಿ1 ರಲ್ಲಿ ಕೆಳ ಅಂತಸ್ತನ್ನು ಮಾತ್ರ ಮಾರಾಟ ಮಾಡುತ್ತಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ1 ರ ಮೇರೆಗೆ ಪ್ರತಿವಾದಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಇ-ಖಾತೆ ಸಹ ಪ್ರತಿವಾದಿ ಹೆಸರಿಗೆ ಬರುತ್ತಿದೆ ಎಂದರೆ ಗೊತ್ತಿಲ್ಲ. ಮನೆಯ ಸಣ್ಣಪುಟ್ಟ ರಿಪೇರಿಯನ್ನು ಪ್ರತಿವಾದಿ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ1 ರ ನಂತರ ಪ್ರತಿವಾದಿ ಮನೆಯನ್ನು ರಿಪೇರಿ ಮಾಡಿಸಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಇತ್ತೀಚೆಗೆ ವಾಸ ಮಾಡುತ್ತಿದ್ದಾರೆ ಎನ್ನುವರು. ನಿಪಿ2 ಮತ್ತು 3 ಖಾತೆ ಎಕ್ಸ್‌ಟ್ರಾಕ್ಟ ಪಡೆದುಕೊಳ್ಳಲು ಪಾವತಿಸಿದ ರಶೀದಿಗಳು ಎಂದರೆ ಗೊತ್ತಿಲ್ಲ. ನಿಪಿ3 ನನ್ನ ಹೆಸರಿನಲ್ಲಿರುವ ಖಾತಾ ಎಕ್ಸ್‌ಟ್ರಾಕ್ಟ ಎಂದರೆ ಸರಿ.

ಪ್ರತಿವಾದಿ ನನಗೆ ಬಾಕಿ ಹಣ ನೀಡದೇ ಕ್ರಯಪತ್ರ ಬರೆಸಿಕೊಂಡಿರುತ್ತಾರೆ ಎಂದು ಹೇಳಿ, ಬಾಕಿ ಹಣಕ್ಕಾಗಿ ವಕೀಲರ ಮೂಲಕ ತಿಳುವಳಿಕೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ. ನಿಪಿ5 ನನ್ನ ಸೊಸೆ ಪೋಲಿಸ್ ಠಾಣೆಗೆ ನೀಡಿದ ದೂರಿನ ಪ್ರತಿ ಎಂದರೆ ಸರಿ. ನಿಪಿ6 ಪೋಲಿಸರು ನೀಡಿದ ಹಿಂಬರಹ ಎಂದರೆ ಸರಿ. ನಿಪಿ7 ಪಟ್ಟಣ ಪಂಚಾಯಿತಿಯವರು ನೀಡಿದ ಹಿಂಬರಹ ಎಂದರೆ ಸರಿ. ಉಪವಿಭಾಗಾಧಿಕಾರಿ ರವರಿಗೆ ನಾನು ದೂರು ನೀಡಿದಾಗ, ಅವರು ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಪಟ್ಟಣ ಪಂಚಾಯಿತಿಗೆ ದೂರು ನೀಡಿ

ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಿಪಿ7 ರಂತೆ ಪಂಚಾಯಿತಿಯವರು ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳಲು ಹಿಂಬರಹ ನೀಡಿರುತ್ತಾರೆ ಎಂದರೆ ಸರಿ.

ದಿನಾಂಕ 5.12.2020 ರಂದು ಪ್ರತಿವಾದಿ ನನಗೆ 3 ಲಕ್ಷದ ಚೆಕ್ ನೀಡಿರುತ್ತಾರೆ ಎಂದರೆ ಸರಿ. ಅದು ನಗದಾಗಿರುತ್ತದೆ ಎಂದರೆ ಸರಿ. ನಾನು ಅಕ್ರಮವಾಗಿ ಹಣ ಪಡೆದುಕೊಳ್ಳುವ ಸಲುವಾಗಿ 23 ಲಕ್ಷ ಕ್ಕೆ ಮಾರಾಟ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ವ್ಯಾಪಾರ 12 ಲಕ್ಷಕ್ಕೆ ಆಗಿದ್ದರೂ ಸಹ ನನ್ನ ಮತ್ತು ಪ್ರತಿವಾದಿ ನಡುವೆ ಮಾವ ಮತ್ತು ಅಳಿಯ ಸಂಬಂಧ ಇದ್ದ ಕಾರಣ ಆತ ನನಗೆ ಇನ್ನು ಹೆಚ್ಚಾಗಿ 3 ಲಕ್ಷ ಹಣ ನೀಡಿರುತ್ತಾನೆ ಎಂದರೆ ಸರಿಯಲ್ಲ. ಕ್ರಯಪತ್ರವಾಗಿದ್ದರೂ ಸಹ ನಾನು ಪ್ರತಿವಾದಿಯಿಂದ ಹೆಚ್ಚಿ ನ ಹಣ ಪಡೆದುಕೊಳ್ಳುವ ಸಲುವಾಗಿ ದಾವಾಸ್ವತ್ತಿನ ಬಳಿ ಹೋಗಿ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.